# ನವಂಬರ್, 2016 - ತಾಳೆ ಬೆಳೆ ಕೃಷಿಗೆ ಸೂಕ್ತ ಸಲಹೆಗಳು

- ತಾಳೆ ತೋಟಗಳಲ್ಲಿ ಕಳೆ ನಿಯಂತ್ರಣಕ್ಕಾಗಿ ಪ್ರತಿ 1.5 ಮಿ.ಲೀ ನೀರಿನಲ್ಲಿ ಗ್ಲೈಫೋಸೇಟ್ ಬೆರಸಿ ಪ್ರತಿ ಎಕರೆಗೆ 300 ಮಿ.ಲೀ. ಸಿಂಪಡಿಸಬಹುದು. ಕಳೆ ನಾಶಕಗಳನ್ನು ಕಳೆಯು ಬೆಳೆಯುವ ಹಂತದಲ್ಲಿದ್ದಾಗಲೇ ಸಿಂಪಡಿಸಿದರೆ ಉತ್ತಮ ಫಲಿತಾಂಶ ಸಿಗುತ್ತದೆ.

- ಸಂಚಿ ಹುಳುಗಳ ಬಾಧೆ ಮತ್ತು ನಿರ್ವಹಣೆ: ತಾಳೆ ಗಿಡಗಳ ಗರಿಗಳ ಕೆಳ ಭಾಗದಲ್ಲಿ ಸಂಚಿ ಹುಳುಗಳ ಗೂಡುಗಳು ನೇತಾಡುತ್ತಿರುವುದು. ಇವು ಎಲೆಗಳನ್ನು ತಿನ್ನುತ್ತದೆ. ಅತಿಯಾದ ಹವಳಿಯಿದ್ದಲ್ಲಿ ಹುಳುಗಳು ಹೆಚ್ಚಿರುವ ಗರಿಗಳನ್ನು ಕತ್ತರಿಸಿ ಸುಡಬೇಕು. ಮೋನೊಕ್ರೊಟೋಫಾಸ್ ನ್ನು (10 ಮಿ.ಲೀ) 10 ಮಿ.ಲೀ ನೀರಿನಲ್ಲಿ ಸೇರಿಸಿ ಬೇರುಗಳ ಮೂಲಕ ನೀಡಬೇಕು.

- ಎಲೆ ತಿನ್ನುವ ಕಂಬಳಿ ಹುಳುಗಳು ಮತ್ತು ನಿರ್ವಹಣೆ: ಎಲೆ ತಿನ್ನುವ ಕಂಬಳಿ ಹುಳುಗಳು ಹೆಚ್ಚಾಗಿ ಕೆಳಗಿನ ಬಲಿತಿರುವ ಗರಿಗಳನ್ನು ತಿನ್ನುತ್ತವೆ. ಇವುಗಳ ನಿಯಂತ್ರಣಕ್ಕೆ 10 ಮಿ.ಲೀ. ಮೋನೋಕ್ರೊಟೋಫಾಸ್ ನ್ನು 10 ಮಿ.ಲೀ. ನೀರಿನಲ್ಲಿ ಹಾಕಿ ಬೇರುಗಳ ಮೂಲಕ ಕೊಡಬೇಕು ಅಥವಾ 2 ಮಿ.ಲೀ ಮೇಲಾತಿಯನ್ ಅಥವಾ ಕ್ವಿನಾಲ್ಫಾಸ್ ನ್ನು ಪ್ರತಿ ಲೀಟರ್ ನೀರಿನಲ್ಲಿ ಬೆರಸಿ ಪಾತಿಯಲ್ಲಿ ಸುರಿಯಬೇಕು.

- ಸುಳಿ ಕೊಳೆ ರೋಗದ ನಿಯಂತ್ರಣಕ್ಕಾಗಿ ಶೇ.1 ರ ಬಾವಿಸ್ಟಿನ್ ದ್ರವಣವನ್ನು ತಾಳೆ ಸಸಿಗಳ ಸುಳಿಯಲ್ಲಿ ಹಾಕಬೇಕು. ಈ ಕ್ರಮವನ್ನು ಮಳೆಗಾಲಕ್ಕೆ ಮೊದಲು ಮತ್ತು ಮಳೆಗಾಲದ ನಂತರ ಮಾಡಬೇಕು.

- ಬುಡ ಕಾಂಡ ಕೊಳೆ ರೋಗದಿಂದ ರಕ್ಷಿಸಲು ರೋಗ ಬಾಧಿತ ಮರಗಳಿಂದ, ತಾಳೆ ಹಣ್ಣಿನ ಗೊಂಚಲು ಮಳೆಗಾಲಕ್ಕೆ ಮುಂಚೆ ಮತ್ತು ಕಟಾವಿನ ನಂತರ ಒಣಗಿದ ಹೂವಿನ ಗೊಂಚಲುಗಳು, ಗೊನೆಗಳ ತೊಟ್ಟುಗಳನ್ನು ತೆಗೆದು ಶೇ.01 ರ ಕಾರ್ಬನ್ ಡೈಜಿಮ್ ದ್ರಾವಣದಿಂದ ಸಿಂಪಡಿಸಬೇಕು.